ಮುಂಬೈಗೆ ಬರುತ್ತಿರಬೇಕು. ಚುನಾವಣೆ ಬಂದಾಗಲೆಲ್ಲಾ ಶಿಂಧೆ ಮುಂಬೈಗೆ ಓಡಿ ಬರುತ್ತಾನೆ. ಹತ್ತು ವರ್ಷದಲ್ಲಿ ಶಿಂಧೆ ಬೆಳೆದ ಪರಿಯೇ ಅದ್ಭುತ. ತಾಲ್ಲೂಕಿನ ಹಿಂದುಳಿದ ಹಳ್ಳಿಯವರಾದ ಶಿಂಧೆ ಮತ್ತು ನಾನು ಇಬ್ಬರೂ ಅನಾಥಾಲಯದಲ್ಲಿ ಕೂಡಿಯೇ ಓದುತ್ತಾ ಅದೇ ಅನಾಥಾಲಯದಲ್ಲೇ ಇರುತ್ತಿದ್ದೆವು. ಆಮೇಲೆ ಶಿಂಧೆಗೆ ಸರಕಾರಿ ನೌಕರಿ ಸಿಕ್ಕು. ಆದರೆ ಆರು ತಿಂಗಳಲ್ಲಿಯೇ ರಾಜೀನಾಮೆ ಎಸೆದು ಹೊರ ಬಂದುಬಿಟ್ಟ.

"ಥೂ!... ಈ ಸರಕಾರಿ ನೌಕರಿ ಯಾರು ಮಾಡುತ್ತಾರೆ; ನಾನಂತೂ ನನ್ನ ಹಳ್ಳಿಗೆ ಹೋಗಿ ನನ್ನ ಆದಿವಾಸಿ ಜನಗಳ ಉದ್ಧಾರದ ಕೆಲಸ ಮಾಡುತ್ತೇನೆ. ನಿನಗೆ ಗೊತ್ತಿದೆ ನಮ್ಮ ಜಾತಿಯಲ್ಲಿ ನಾನೊಬ್ಬನೆ ಪದವೀಧರ. ಉಳಿದವರೆಲ್ಲಾ ಅಂಗುಟಾ ಚಾಪ್‌ಗಳು. ಅವರಿಗಾಗಿ ದುಡಿಯದಿದ್ದರೆ ನಾನು ಇಷ್ಟು ಕಲಿತು ಉಪಯೋಗವಾದರೂ ಏನು?"

ಶಿಂಧೆ ತನ್ನ ಆದಿವಾಸಿಗಳಿಗಾಗಿ ಹಾಲಿನ ಒಂದು ಸೊಸೈಟಿ ತೆಗೆದಾಗಿನಿಂದ ಅವನೇ ಛೇರ್‌ಮನ್ ಆಗಿದ್ದಾನೆ. ಅವನಿಗೆ ಮಂತ್ರಿ ಆಗುವ ಉತ್ಕಟ ಕನಸಿದೆ ಮತ್ತು ಅವನು ಆಗಿಯೂ ಆಗುತ್ತಾನೆ. ತನ್ನ ಚಾಲಾಕೀತನದಿಂದ ಆತ ಎಲ್ಲಿಯೋ ಹೋಗಿ ತಲುಪಿದ್ದಾನೆ. ಇಂದು ಸಂಜೆ ಅವನ ಭೇಟಿಯಾಗುತ್ತಲೇ ಇಡೀ ಊರಿನ ಹಾಲ್‌ಚಾಲ್ ಗೊತ್ತಾಗುತ್ತದೆ.

ಎಂಎಲ್‌ಎ ಅವರ ಮನೆ ಮುಂದೆ ಜನ ಸೇರತೊಡಗಿದ್ದರು. ಮಂತ್ರಿಮಂಡಲದಲ್ಲಿ ಬದಲಾವಣೆ ಆಗುತ್ತಲೇ ಇರುತ್ತದೆ. ಇಷ್ಟು ಜನ ಸೇರುತ್ತಿರುವುದನ್ನು ನೋಡಿ ಅವನಿಗೆ ಊರಿನ ಜಾತ್ರೆಯ ನೆನಪಾಗುತ್ತದೆ. ಊರಿನ ಜಾತ್ರೆಯಲ್ಲಿ ಮನುಷ್ಯರಷ್ಟೇ ಅಲ್ಲ ಎಲ್ಲ ಕಡೆಯಿಂದ ದನಗಳು ಕೂಡಾ ಬರುತ್ತಿದ್ದವು. ಎಂತೆಂಥ ದನಗಳು– ದಪ್ಪನೆಯ, ಸೊರಗಿದ, ಸೊಕ್ಕಿದ, ವಿವಿಧ ಕೋಡುಗಳ ಬೇರೆ ಬೇರೆ ಜಾತಿಯ ದನಗಳು ಸೇರುತ್ತಿದ್ದವು. ಇಲ್ಲಿ ಜನಗಳು ಸೇರುವುದು ಕೂಡಾ ಆ ದನಗಳಂತೆನಿಸಿ ಮನಸ್ಸಿನಲ್ಲಿಯೇ ನಗತೊಡಗುತ್ತಾನೆ.

ಶಿಂಧೆಗೆ ಕಾದು ಕಾದು ಅವನಿಗೆ ಬೇಸರ ಬರುತ್ತಿದ್ದಂತೆ ಮನೆಯ ಹಾದಿ ಹಿಡಿಯ ಬೇಕೆನಿಸಿ, ಮನೆಯ ನೆನಪು ಬಂದ ತಕ್ಷಣ ಅವನ ಮುಖ ಬೆಳಗಿಕೊಳ್ಳುತ್ತದೆ. ಅಷ್ಟರಲ್ಲಿ ಜೀಪೊಂದು ಅವನ ಕಡೆ ಬಂದು ನಿಲ್ಲುತ್ತದೆ; ಶಿಂಧೆ ಕೆಳಗಿಳಿಯುತ್ತಾನೆ. ಶಿಂಧೆ ಬಹಳ ಬದಲಾಗಿದ್ದಾನೆ. ಎಲ್ಲಿಯ ಕಪ್ಪಗಿನ ತೆಳ್ಳಗಿನ ಶಿಂಧೆ, ಎಲ್ಲಿ ಈ ಕೆಂಪು ಕೆಂಪಗಿನ ಶಿಂಧೆ! ಕಪ್ಪನೆಯ ಚರ್ಮ ಕೆಂಪಾಗಿದೆ. ರೇಷ್ಮೆಯ ಸೂಟ್, ಕೈಯಲ್ಲಿ ಸಿಗರೇಟ್, ಹಿಂದೆ ಬಿದ್ದ ಉದ್ದನೆಯ ಕೂದಲು... ಶಿಂಧೆ ಥೇಟು ನಟನ ಹಾಗೆ ಕಂಡು ಬರುತ್ತಿದ್ದಾನೆ.

"ಚಲ್ ರೇ! ಗಾಡಿ ಮೇ ಬೈಟ್!..." ಶಿಂಧೆಯ ಆವಾಜಿನಲ್ಲಿ ಒಂದು ರುಬಾಬ್ ಕಂಡು ಬರುತ್ತದೆ.

"ಪಾರ್ಟಿ ಚಲನಾ ಹೈ. ಚಲ್ ರೇ" ಎಂದು ಶಿಂಧೆ ಒಬ್ಬ ಶಾನದಾರ್ ನೇತಾರನ ಆವಾಜಿನಲ್ಲಿ ಹೇಳಿದಂತೆ ಕಂಡು ಬರುತ್ತದೆ. ಯಾವುದೋ ಸೂತ್ರ ಚಾಲಿತ ಗೊಂಬೆಯಂತೆ ಅವನ ಪಕ್ಕ ಹೋಗಿ ಕುಳಿತುಕೊಳ್ಳುತ್ತಾನೆ.

"ಇನ್ನೂ ಏಕೆ ಅದೇ ಕಾರ್ಖಾನೆಯಲ್ಲಿ ಕೆಲಸ ಮಾಡಿತ್ತಿದ್ದೀಯಾ? ನನ್ನ ಜೊತೆ ನಡೆ; ನಿನ್ನ ಜೀವನ ಬಂಗಾರವಾಗುತ್ತದೆ" ಎಂದು ಶಿಂಧೆ ಸಿಗರೇಟ್ ಸೇದುತ್ತಾ ಅದರ ಹೊಗೆಯನ್ನು ಬಿಡುತ್ತಾ ನಗುತ್ತಾ ಹೇಳುತ್ತಾನೆ. ವೇಗ ಪಡೆದುಕೊಂಡ ಜೀಪು ಒಂದು ತಿರುವಿನ ನಂತರ ಭವ್ಯ ಬಂಗಲೆಯ ಮುಂದೆ ನಿಂತುಕೊಳ್ಳುತ್ತದೆ.

"ಶಹರದಲ್ಲಿ ಇರುತ್ತಿ, ಅದರೆ ಇನ್ನೂ ಗಾಂವಟಿಯಾಗಿಯೇ ಇದ್ದೀಯಾ, ನಡಿ ಇವತ್ತು ನಿನಗೆ ಹೊಸ ಲೋಕ ತೋರಿಸುವೆ'' ಎನ್ನುತ್ತಾ ಶಿಂಧೆ ಕೆಳಗಿಳಿಯುತ್ತಾನೆ. ಇಬ್ಬರು ಬಂಗ್ಲೆಯ ಮೆಟ್ಟಿಲು ಏರಿ ಲಿಫ್ಟ್ ಹತ್ತಿರ ಹೋಗಿ ಅದು ಕೆಳ ಬಂದ ತಕ್ಷಣ ಶಿಂಧೆ ಒಳ ಹೋಗುತ್ತಾನೆ ಅವನ ಹಿಂದೆಯೇ